ಮುಂಜಾವು

ವಾರಪತ್ರಿಕೆ

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 27ನೇ ಸಂಚಿಕೆ ಕೊಪ್ಪ 22-3-1987 ಭಾನುವಾರ ಬೆಲೆ 50 ಪೈಸೆ

ಮತ್ತೆ 'ಓಕುಳಿ' ಯತ್ನ: ಎಸ್ಪಿ ಎಚ್ಚರಿಕೆ

ತಾ|| 15.3.87ರ ನಮ್ಮ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದ, ಬಳ್ಳಾರಿ ಜಿಲ್ಲೆಯ ಮುದ್ದಟನೂರು ಮತ್ತು ಕಲ್ಕುಂಬ ಗ್ರಾಮಗಳಲ್ಲಿ ದಲಿತ ಯುವತಿಯರ ಮೇಲೆ ನಡೆಯುತ್ತಿದ್ದ 'ಓಕುಳಿ' ಹೆಸರಿನ ಧಾರ್ಮಿಕ ಅತ್ಯಾಚಾರವನ್ನು ಈ ವರ್ಷ ಪುನಃ ನಡೆಸಲು ಕೆಲವರು ಪ್ರಯತ್ನಿಸುತ್ತಿರುವುದಾಗಿ ವರದಿಯಾಗಿದೆ

'ಓಕುಳಿ'ಯನ್ನು ಪುನಃ ಆರಂಭಿಸಲು ಪ್ರೋತ್ಸಾಹಿಸುವವರ ವಿರುದ್ಧ ಉಗ್ರಕ್ರಮ ಕೈಗೊಳ್ಳುವುದಾಗಿ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳು ಎಚ್ಚರಿಸಿದ್ದಾರೆ. ಈ ಕೆಟ್ಟ ಪದ್ಧತಿಯನ್ನು ಹತ್ತಿಕ್ಕಲು ಎಲ್ಲಾ ಸೇವಾ ಸಂಸ್ಥೆಗಳೂ, ಸಾರ್ವಜನಿಕರೂ ಸಹಕರಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಕೊಪ್ಪ ಸಂತೆಯಲ್ಲಿ ಮತ್ತೆ ತಲೆಯೆತ್ತುತ್ತಿರುವ ಜೇಬುಗಳ್ಳರು: ಬಸ್ ಸ್ಟ್ಯಾಂಡ್ ಸುಧಾರಣೆಗೆ ಕೆಲ ಸಲಹೆಗಳು

ಕೊಪ್ಪ: ಇಲ್ಲಿನ ಸಂತೆಯಲ್ಲಿಜೇಬುಗಳ್ಳರಹಾವಳಿ ಪುನಃ ಶುರುವಾಗಿರುವಂತೆಕಾಣುತ್ತಿದೆ. ಈಚೆಗೆ ಇಂಥ ಒಂದೆರಡು ಪ್ರಕರಣಗಳು ಕೇಳಿ ಬಂದಿವೆ. ಕಳೆದ ವಾರ ಕಳ್ಳರು ನಿಲುವಾಗಿಲು ಬಳಿಯ ರೈತರೊಬ್ಬರ ಜೇಬು ಕತ್ತರಿಸಿ 200 ರೂ. ಹಾರಿಸಿದ್ದು, ಅವರು ಬಸ್ ಟಿಕೆಟ್ ಕೊಳ್ಳಲು ಬಹುಶಃ 'ದಾಕ್ಷಿಣ್ಯ ಖರ್ಚು ಮಾಡಬೇಕಾಗಿ ಬಂದ' ಸಂಗತಿ ಗೊತ್ತಾಗಿದೆ.

ಕೆಲ ದಿನಗಳ ಹಿಂದೆ ಸಬ್ ಇನ್‌ಸ್ಪೆಕ್ಟರ್ ದುರ್ಗಯ್ಯನವರನ್ನು ಈ ಬಗ್ಗೆ ವಿಚಾರಿಸಿದಾಗ, ಹೆಚ್ಚಾಗಿ ಭದ್ರಾವತಿ, ಶಿವಮೊಗ್ಗ, ತರೀಕೆರೆ ಕಡೆಗಳ ಸಂತೆಗಳ್ಳರು ಇಲ್ಲಿ ಬಂದು ಕೃತ್ಯ ಎಸಗುವುದಾಗಿದ್ದು, ತಾವು ಇಲ್ಲಿಗೆ ಬಂದ ಹೊಸದರಲ್ಲಿ ಸ್ವಲ್ಪ ಶಂಕೆ ಬಂದರೂ ಅಂಥವರ ಮೇಲೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳತೊಡಗಿದ್ದರಿಂದ ಕಳೆದೊಂದು ವರ್ಷದಿಂದ ಈ ಹಾವಳಿ ತಡೆಗಟ್ಟಲು ಸಾಧ್ಯವಾಗಿತ್ತೆಂದು ತಿಳಿಸಿದ್ದರು. ಆದರೆ ಅಷ್ಟರಲ್ಲೇ ಇಂಥ ಒಂದೆರಡು ಘಟನೆಗಳು ಪುನಃ ನಡೆದಿವೆ.

ಬಸ್ಸ್ಟ್ಯಾಂಡ್ ಸುಧಾರಣೆಗೆ ಸಲಹೆ

ಮೊನ್ನೆ ಹಣ ಕಳೆದುಕೊಂಡ ಸದರಿ ರೈತ ಹಿರಿಯರು 'ಮುಂಜಾವು' ಜೊತೆ ಮಾತಾಡುತ್ತಾ, ಬಸ್‌ಸ್ಟ್ಯಾಂಡಿನಲ್ಲಿ ಗೊಂದಲ ಹೆಚ್ಚುವುದರಿಂದ ಇಂಥದಕ್ಕೆ ಅವಕಾಶ ಹೆಚ್ಚಾಗಿದ್ದು, ಅಂಥ ಗೊಂದಲ ತಪ್ಪಿಸಲು ಕೆಲವು ಸಲಹೆಗಳನ್ನು ಸೂಚಿಸಿದ್ದಾರೆ.

1 ಬಸ್‌ಸ್ಟ್ಯಾಂಡಿನಲ್ಲಿ ಇಂಥ ಸಂದರ್ಭಗಳಲ್ಲಿ ಸಾಕಷ್ಟು ಪೋಲೀಸರು ಇರಬೇಕು. ಮೊನ್ನೆ ಸ್ಥಳದಲ್ಲಿ ಪೋಲೀಸರು ಇದ್ದಿದ್ದರೆ ಬಹುಶಃ ಕಳ್ಳರನ್ನು ಆ ಕೂಡಲೇ ಹಿಡಿಯುವುದು ಕಷ್ಟವಾಗುತ್ತಿರಲಿಲ್ಲ. ಪೋಲೀಸರಿದ್ದರೂ ಬಹುಶಃ ಸಾಕಷ್ಟು ಜಾಗರೂಕರಾಗಿರುವ ಹಾಗೆ ಕಾಣುವುದಿಲ್ಲ.

2. ಬಸ್ಸುಗಳು ಸ್ಟ್ಯಾಂಡಿಗೆ ಬಂದಾಗ ಪ್ರಯಾಣಿಕರು ಇಳಿಯುವುದಕ್ಕೆ ಪ್ರತ್ಯೇಕ ಸ್ಥಳ ಇರಬೇಕು. ಅಲ್ಲಿ ಪ್ರಯಾಣಿಕರನ್ನು ಇಳಿಸದೆ ಬಸ್ಸುಗಳು ಸ್ಟ್ಯಾಂಡ್ ಪ್ರವೇಶಿಸಬಾರದು.

3. ಬೇರೆ ಬೇರೆ ಕಡೆಗೆ ಹೋಗುವ ಬಸ್ಸುಗಳಿಗೆ ಬೇರೆ ಬೇರೆ ಜಾಗಗಳನ್ನು ನಿಗದಿಗೊಳಿಸಬೇಕು. ಯಾವ ಕಾರಣಕ್ಕೂ ಈ ನಿಯಮ ಸಡಿಲಗೊಳ್ಳಲು ಬಿಡಬಾರದು.

4. ಸ್ಟ್ಯಾಂಡಿನೊಳಗೆ ಆಟೋ. ಟೆಂಪೋ, ಲಾರಿ ಮುಂತಾದ ಇತರ ವಾಹನಗಳ ಓಡಾಟವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು. ಇಂಥ ವಾಹನಗಳು ತಿರುಗಿ ಬರಲು ಬೇರೆ ಸ್ಥಳವನ್ನು ಉಪಯೋಗಿಸಬೇಕು, ಸ್ಟ್ಯಾಂಡನ್ನಲ್ಲ.

5. ಈ ಎಲ್ಲ ನಿಯಮ ಮತ್ತು ನಿರ್ಬಂಧಗಳು ವಾರದ ಎಲ್ಲ ದಿನಗಳಲ್ಲೂ ಇದ್ದು, ಸಂತೆಯ ದಿನ ಹೆಚ್ಚು ಬಂದೋಬಸ್ತು ಇರಬೇಕು.

ಶೃಂಗೇರಿ ಮಠದ ಮುದಿ ಗೂಳಿಯನ್ನು ಮಾಂಸಕ್ಕೆ ಮಾರಿದ ಆರೋಪ: ಮಠಕ್ಕೂ ವಿ. ಹಿಂ. ಪ. ದವರಿಗೂ 'ಗೂಳಿ' ಕಾಳಗ!?

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಇಲ್ಲಿನ ಮಠದಲ್ಲಿದ್ದ ಗೂಳಿಯೊಂದು ಮುದಿಯಾಯಿತೆಂದು ಅದನ್ನು ಮಾರಾಟ ಮಾಡಿದ ಬಗ್ಗೆ ಜನತೆಯಲ್ಲಿ ತೀವ್ರ ಅಸಮಾಧಾನದ ಹೊಗೆ ಎದ್ದಿದ್ದು, ವಿಶ್ವ ಹಿಂದು ಪರಿಷತ್ತಿನವರಿಗೂ ಮಠದವರಿಗೂ 'ಗೂಳಿ ಕಾಳಗ'ವಲ್ಲದಿದ್ದರೂ ಅಂಥದೇ ಮುಸುಕಿನ ಗುದ್ದಾಟ ನಡೆದಿರುವುದು ಈಗ ಜನ ಜನಿತವಾಗಿದೆ.

ಅಪ್ರಯೋಜಕ

ಸುಮಾರು 6 ಅಡಿ ಎತ್ತರದ, ಸುಧಾರಿತ ತಳಿಯ ಈ ಗೂಳಿಗೆ ವಯಸ್ಸಾದ ಕಾರಣ ಕೆಲ ಸಮಯದಿಂದ ಅದನ್ನು ಹೂಟಿಗೆ ಉಪಯೋಗಿಸದೆ ಕೇವಲ 'ವಂಶಾಭಿವೃದ್ಧಿ'ಗೆ ಮಾತ್ರ ಬಳಸಲಾಗುತ್ತಿತ್ತೆನ್ನಲಾಗಿದೆ. ಆದರೆ ಈಚೆಗೆ ವಯಸ್ಸಿನಿಂದ ತೀರ ಜರ್ಝರಿತವಾದ ಅದು ಅಪ್ರಯೋಜಕವೆಂದು ಅಲ್ಲಿನ ಮೇಸ್ತ್ರಿ ಗಣೇಶಯ್ಯ ಎಂಬವರು ಗುರುಗಳಿಗೆ ತಿಳಿಸಿದಾಗ, 'ಯಾರಿಗಾದರೂ ಮಾರಿ ಬಿಡಿ' ಎಂಬ ಅವರ ಸೂಚನೆಯಂತೆ ಕಾಡಶೆಟ್ಟಿ ಎಂಬ ಜಾನುವಾರು ವ್ಯಾಪಾರಿಗೆ, ವಾಡಿಕೆಯಂತೆ 700 ರೂ. 'ಕಾಣಿಕೆ' ಎಂದು ಪಡೆದು ಗೂಳಿಯನ್ನು ಮಾರಲಾಗಿತ್ತೆನ್ನಲಾಗಿದೆ.

ಗೂಳಿಯನ್ನು ಕಾಡಶೆಟ್ಟರು ಶೃಂಗೇರಿ ಜಾತ್ರೆಯಲ್ಲಿ 8-10 ದಿನ ಕಟ್ಟಿಕೊಂಡಿದ್ದು, ದ. ಕನ್ನಡದ ಮುಸ್ಲಿಂ ಜಾನುವಾರು ವ್ಯಾಪಾರಿಯೊಬ್ಬರಿಗೆ 1600 ರೂ:ಗಳಿಗೆ ಮಾರಿದ್ದು ತಿಳಿದ ಜನ, ಮಠದವರು ಗೂಳಿಯನ್ನು ಮಾಂಸಕ್ಕೆ ಮಾರಿದ್ದಾಗಿ ಭಾವಿಸಿ ಊರಿನಲ್ಲಿ ದೊಡ್ಡ ಗುಲ್ಲಾಯಿತು.

ಗೂಳಿಯನ್ನು ಉಚ್ಚಿಲ ಎಂಬಲ್ಲಿಗೆ ಮಾರಿದ್ದನ್ನು ತಿಳಿದು ವಿಶ್ವಹಿಂದು ಪರಿಷತ್ತಿನ ಕೆಲವರು ಅಲ್ಲಿಗೆ ಹೋಗಿ ಅವರು ಕೊಂಡ ಹಣವಾದ 1600 ರೂ. ಗಳನ್ನು ವಂತಿಗೆ ಎತ್ತಿ ಅವರಿಗೆ ಕೊಟ್ಟು, ಗೂಳಿಯನ್ನು ವ್ಯಾನಿನಲ್ಲಿ ಕರೆ ತಂದು ಈಗ ಟಿ. ಎನ್. ಕೃಷ್ಣ ಭಟ್ಟರ ಮನೆಯಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ.

ಈ ಗೂಳಿಗೆ ಮಾರುಕಟ್ಟೆಯಲ್ಲಿ ಸಾಧಾರಣ 5 ಸಾವಿರ ರೂ.ವರೆಗೆ ಬೆಲೆಯಿದೆಯೆಂದೂ, ಮಾಂಸವಾದರೆ 7–8 ಸಾವಿರ ರೂ. ವರೆಗೂ ಸಿಗಬಹುದೆಂದೂ ಹೇಳಲಾಗಿದೆ.

ಇಷ್ಟೆಲ್ಲ ಸಂಪತ್ತು ಇರುವ ಮಠದವರಿಗೆ ಇದೊಂದು ಗೂಳಿಯನ್ನು ಇಷ್ಟು ವರ್ಷ ದುಡಿಸಿಕೊಂಡು ಈ ಕಡೆಗಾಲದಲ್ಲಿ ಸ್ವಲ್ಪ ಕಾಲ ಸಾಕಲು ಆಗುತ್ತಿರಲಿಲ್ಲವಾ? ಅದನ್ನು ಮಾಂಸಕ್ಕೆ ಮಾರಬೇಕಾದ ದರಿದ್ರ ಏನು ಬಂದಿದೆ? ಹಾಗೆ ಮಠದವರಿಗೆ ಅಷ್ಟೊಂದು ಹಣದಾಹ ಹುಟ್ಟಿದ್ದರೆ ಅಲ್ಲಿನ ಮೀನು-ಗೀನು ಎಲ್ಲಾ ಮಾರಿಬಿಡಲಿ ಎಂಬುದಾಗಿ, ಊರಿನ ಸಾಮಾನ್ಯ ಜನ ಹಾಗೂ ವಿ. ಹಿಂ. ಪರಿಷತ್ತಿನ ಕೆಲವರು, ಒಟ್ಟಾರೆ ಮಠದ ಮೇಲಿರುವ ಅಸಮಾಧಾನದಿಂದಾಗಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

"ಆಗ ಎಲ್ಲಿದ್ದರು?"

ಕಾಡಶೆಟ್ಟರನ್ನು ಕೇಳಿದಾಗ, "ನಾನು ಅದನ್ನು ಕಾಪುವಿನ ಸುಬ್ಬಣ್ಣ ಶೆಟ್ಟರಿಗೆ ಮಾರಿದ್ದು. ಅವರ ಮನೆಯಲ್ಲಿ ತುಂಬಾ ಜಾನುವಾರು ಕಟ್ಟಿ ಡೈರಿ ಮಾಡಿದ್ದಾರಂತೆ. ಒಂದು ಗೂಳಿ ಬೇಕೆಂದಿದ್ದರು. ಒಂದೇ ಬಾರಿ ಅಷ್ಟು ದೂರ ನಡೆಸಲಾಗದೆ ಉಚ್ಚಿಲದಲ್ಲಿ ಸ್ಯಾಬರ ಮನೆಯಲ್ಲಿ ಕಟ್ಟಿದ್ದರಂತೆ. ನಾನು ಯಾವ ಜಾನುವಾರನ್ನೂ ಇಲ್ಲಿಯವರೆಗೆ ಮಾಂಸಕ್ಕೆ ಮಾರಿದ್ದಿಲ್ಲ. ಇವರೆಲ್ಲ ಈಗ ಇಷ್ಟೆಲ್ಲ ಹುಯಿಲೆಬ್ಬಿಸೋಕೆ, ನಾನು ಇಲ್ಲೇ 8–10 ದಿನ ಅದನ್ನು ಕಟ್ಟಿಕೊಂಡಿದ್ದಾಗ ಇವರೆಲ್ಲ ಎಲ್ಲಿ ಹೋಗಿದ್ದರಂತೆ?" ಎನ್ನುತ್ತಾರೆ.

ಒಟ್ಟಿನಲ್ಲಿ ಈ ಹಗರಣದಿಂದಾಗಿ, ಮಠದವರ ಬಗ್ಗೆ ಊರಿನ ಹಲವಾರು ಜನರಿಗೆ ಇರುವ ಅಸಮಾಧಾನ ಬೆಳಕಿಗೆ (ಬೀದಿಗೆ) ಬಂದಿರುವುದಲ್ಲದೆ, ಮಠದವರಿಗೂ ವಿ.ಹಿಂ.ಪ.ದವರಿಗೂ ಮಧ್ಯೆ ವೈರುಧ್ಯವುಂಟಾಗಿ ಮಠದ ಮಾನ ಬೀದಿಯಲ್ಲಿ ಚೆಲ್ಲಾಪಿಲ್ಲಿಯಾಗಿದೆ ಎನ್ನುತ್ತಿದ್ದಾರೆ ಜನ.

ಬಾಳೆಹೊನ್ನೂರು ಕ. ವಿ. ಮಂ. ಇಂಜಿನಿಯರ್

ದುಗ್ಗಪ್ಪಗೌಡ 1'/. ಮನುಷ್ಯರಾದರೂ ಆದಾರೆ?

ಬೇಸಿಗೆ ರಣಗುಡತೊಡಗಿದೆ. ಈವರೆಗೂ ಂಗಾರಿನ ಒಂದು ಮಳೆಯೂ ಬಿದ್ದಿಲ್ಲ. ಂಥ ಪರಿಸ್ಥಿತಿಯಲ್ಲಿ ಕಾಫಿ–ಅಡಿಕೆ ತೋಟ ಳ ಶ್ರೀಮಂತರ ಮಾತಿರಲಿ, ಕೊಳಿಕೆ ಗದ್ದೆ, ಳೆ, ಮನೆಯ ಸುತ್ತಮುತ್ತ ಅಷ್ಟಿಷ್ಟು ರಕಾರಿ, ತೆಂಗು, ಹಣ್ಣು–ಹಂಪಲು ಇತ್ಯಾ ಬೆಳೆಯುತ್ತ ಹೇಗೋ ಬೇಸಿಗೆ ತಳ್ಳ ೇಕಿರುವ ಸಣ್ಣಪುಟ್ಟ ಕೃಷಿಕರಿಗೆ ಕೂಡ ೀಚಿನ ವರ್ಷಗಳಲ್ಲಿ ಸಾಲ–ಸೋಲ ಮಾಡಿ ನಾದರೂ ಒಂದು ಪಂಪ್‌ಸೆಟ್ ಹಾಕಿಸಿ ೊಳ್ಳುವ ಆಶಾವಾದ ಬೆಳೆಯುತ್ತಿದೆ. ಇದು ಗ್ರಾಮೀಣ ಬದುಕಿನ ದೃಷ್ಟಿಯಿಂದ ಒಂದು ಸ್ವಾಗತಾರ್ಹ ಬೆಳವಣಿಗೆಯೇ ಸರಿ.

ಇದಕ್ಕೆ ಪೂರಕವಾಗಿ ಕೃಷಿ ಅಭಿವೃದ್ಧಿ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಸಹ ಹಲವು ಉಪಯುಕ್ತವಾದ, ಸುಲಭ ಸಾಧ್ಯವಾದ ಯೋಜನೆಗಳನ್ನು ರೂಪಿಸಿ ಜಾರಿಗೆ ತರುತ್ತಿರುವುದು ಗಮನಾರ್ಹವಾಗಿದೆ.

ಆದರೆ ಈ ಬೆಳವಣಿಗೆಗೆ ಅತಿ ಮುಖ್ಯವಾದ ಅಂಶ ವಿದ್ಯುತ್ತಿನ ಪೂರೈಕೆ. ಅದೊಂದು ಇಲ್ಲದಿದ್ದರೆ, ಬಾವಿಯೋ, ಕೆರೆಯೋ, ಹಳ್ಳವೋ ಅದರಲ್ಲಿ ಎಷ್ಟೇ ನೀರಿದ್ದರೂ ಅದು ಪ್ರಯೋಜನಕ್ಕಿಲ್ಲವಾಗುತ್ತದೆ. ನಮ್ಮ ಈ ಭಾಗದಲ್ಲಿ ಈಗ ಇರುವ ಪರಿಸ್ಥಿತಿಯೂ ಯಥಾವತ್ ಇದೇ ಆಗಿದೆ.

ಕ. ವಿ. ಮಂಡಳಿಯ ಬಾಳೆಹೊನ್ನೂರು ಉಪವಿಭಾಗದ ವ್ಯಾಪ್ತಿಗೆ ಹೆಚ್ಚು ಕಡಿಮೆ ಇಡೀ ಶೃಂಗೇರಿ ವಿಧಾನ ಸಭಾ ಕ್ಷೇತ್ರ ಬರುತ್ತದೆ. ಕಳೆದ ಸುಮಾರು ಏಳು ವರ್ಷಗಳಿಂದಲೂ ವರ್ಗಾವಣೆಯೇ ಇಲ್ಲದಂತೆ ಈ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿರುವ ದುಗ್ಗಪ್ಪಗೌಡ ಈ ಪ್ರದೇಶದ ರೈತರ ಪಾಲಿಗೆ ಏನಾಗಿದ್ದಾರೆ ಎಂಬುದಕ್ಕೆ ಇಲ್ಲಿ ಕೆಲವು ನಿದರ್ಶನಗಳನ್ನು ಕೊಡಲಾಗಿದೆ.

ಒಬ್ಬ ರೈತ ಐದು ಎಕರೆ ಪಾಳು ಬಿದ್ದಿದ್ದ ಭೂಮಿ ಕೊಂಡು ಕೃಷಿಗೆ ತೊಡಗಿದ್ದಾರೆ. ತೆಂಗು, ಬಾಳೆ, ತರಕಾರಿ ಮುಖ್ಯವಾಗಿ ನೆಟ್ಟಿದ್ದಾರೆ. ಭೂ ಅಭಿವೃದ್ಧಿ ಬ್ಯಾಂಕಿನ ಸಾಲದಿಂದ ತೋಡಿಸಿದ ಬಾವಿಯಲ್ಲಿ ಸಮೃದ್ಧವಾಗಿ ನೀರಿದೆ. ತೆಂಗು ನಳನಳಿಸುತ್ತ ಮೇಲೆ ಬರುತ್ತಿದೆ. "ಬರೀ ಇಷ್ಟು ಬಾಳೆಯಲ್ಲಿ ವಾರಕ್ಕೆ ಮುನ್ನೂರು ರೂಪಾಯಿಗೆ ಕಡಿಮೆಯಿಲ್ಲದಂತೆ ನಾನು ದುಡಿದುಕೊಳ್ಳುತ್ತಿದ್ದೆ ಸಾರ್. ಬ್ಯಾಂಕ್ ಸಾಲಕ್ಕೆ ಮತ್ತು ನಮ್ಮ ತತ್ಕಾಲದ ಜೀವನಕ್ಕೆ ಇದು ಸಾಕಾಗಿತ್ತು. ಆದರೆ ಏನು ಮಾಡುವುದು, ದುಗ್ಗಪ್ಪಗೌಡರೊಬ್ಬರು ಇಲ್ಲದಿದ್ದಿದ್ದರೆ....!" ಎಂದು ನಿಟ್ಟುಸಿರು ಬಿಡುತ್ತಾರೆ

ಆದಕ್ಕೆ ಕಾರಣವಿದೆ. ಕಚೇರಿಗಳಿಗೆ ಅಲೆದು ಅಲೆದು. ಅವರು ಕೇಳಿದ ಕಡತಗಳನ್ನೆಲ್ಲ ಒದಗಿಸಿಕೊಟ್ಟು ಇವರಿಗೆ ವಿದ್ಯುತ್ ಸಂಪರ್ಕ ಮಂಜೂರಾಗಿ 12.5.86ರಲ್ಲಿ ಡಿಪಾಸಿಟ್ ಕೂಡ ಕಟ್ಟಿದರು. ವರ್ಕ್ ಆರ್ಡರ್ ಕೂಡ ಬಂದು ಈಗ 6 ತಿಂಗಳ ಮೇಲಾಗಿದೆ. ಪಂಪ್‌ಸೆಟ್ ತಂದಿಟ್ಟು ವರ್ಷದ ಮೇಲಾಗಿದೆ. ಹೊಸದಾಗಿ ಕಂಬ, ಲೈನ್ ಕೂಡ ಬೇಕಿಲ್ಲ ಈಗಾಗಲೇ ಇದೆ. ಇಷ್ಟಿದ್ದೂ ಸಂಪರ್ಕ ಕೊಟ್ಟಿಲ್ಲ.

20 ಅಂಶದ ಸಭೆಯಲ್ಲಿ ಗೋವಿಂದ ಗೌಡರು ವಿಚಾರಿಸಿದಾಗ ಕಂಬ ಇಲ್ಲ, ಅದಿಲ್ಲ, ಇದಿಲ್ಲ ಅಂದರಂತೆ. "ಯಾಕ್ರೀ ಇಲ್ಲ ಅಂತೀರಿ? ಎಷ್ಟು ಬೇಕು ಕೇಳ್ರಿ ಕೊಡ್ತಾ ಇದ್ದೀವಲ್ಲ. ರೈತರಿಗೆ ಯಾಕ್ರೀ ಸತಾಯಿಸ್ತೀರಿ?" ಎಂದು ಗೌಡರು ಗದರಿದಾಗ 'ಆಯ್ತು ಸಾರ್. ಇನ್ನೊಂದು ವಾರದಲ್ಲಿ ಕೊಡ್ತೀನಿ' ಎಂದದ್ದೂ ಉಂಟಂತೆ. ಜಿಲ್ಲಾ ಎಕ್ಸಿಕ್ಯುಟಿವ್ ಇಂಜಿನಿಯರ್‌ರಿಂದಲೂ ಕಟ್ಟುನಿಟ್ಟಾದ ಆದೇಶ ಬಂದಿದೆ. ಆದರೂ, "ನನಗೆ ಇಂತಿಷ್ಟು ಕೊಟ್ಟರೆ ಮಾತ್ರ...." ಎಂದು ಬಾಯಿ ಬಿಟ್ಟೇ ಹೇಳ್ತಾರಂತೆ. "....ಹೌದು ಸಾರ್. ಈ ಮನೆಹಾಳ ಅಧಿಕಾರಿಗಳಿಗೆ ಲಂಚ ಕೊಡಲೇಬೇಕೆಂದು ಗೊತ್ತು. ಸರ್ಕಾರವೇ ಆ ಮಟ್ಟಕ್ಕೆ ಬಂದಿದೆ. ನಾವೂ ಕೊಡುತ್ತೇವೆ. ಈಗಾಗಲೇ ಒಂದಷ್ಟು ಕೊಟ್ಟೂ ಆಗಿದೆ. ಆದರೆ ಇಲ್ಲಿ ನಾವು ಸಾಲಸೋಲದಲ್ಲಿ ಮೂಗಿನವರೆಗೆ ಮುಳುಗಿರುವಾಗ, ಇತ್ತ ಫಸಲು ಕೂಡ ಇಲ್ಲದೆ ನೆಟ್ಟಿದ್ದೆಲ್ಲ ಒಣಗುತ್ತಿರುವಾಗ ಐನೂರು, ಸಾವಿರ ಸುರಿಯಬೇಕೆಂದರೆ ನಮ್ಮ ಮಕ್ಕಳು–ಮರಿ ಹೊಟ್ಟೆಗೆ ಕೂಡ ಏನಾದರೂ ಹಾಕಬೇಡವಾ?...." ಎಂದು ಮರುಗುತ್ತಾರೆ.

ಈಗ, ನೆಟ್ಟ ಗಿಡಗಳು ಕಮರಿ ಹೋಗುವುದು ನೋಡಲಾಗದೆ ಸಂಕಟಪಡುತ್ತ ಗಂಡ–ಹೆಂಡತಿ ಇಬ್ಬರೇ ಬೆಳಿಗ್ಗೆ ಸಂಜೆ ಬಾವಿಯಿಂದ ನೀರು ಸೇದಿ ಸೇದಿ ಹೊತ್ತು ಹೊಯ್ಯುತ್ತಿದ್ದಾರೆ–ಅದರ ಒಂದು ಹನಿಯಾದರೂ ದುಗ್ಗಪ್ಪಗೌಡರ ಬೆಂಗಾಡ ಹೃದಯದಲ್ಲೆಲ್ಲೋ ಒಂದಾದರೂ ಅನುಕಂಪದ ಗರಿಕೆ ಮೊಳೆಯಿಸೀತು ಎಂಬ ಆಸೆಯಿಂದಲೋ ಎಂಬಂತೆ....

ಇನ್ನೊಂದು ಹಳ್ಳಿಯಲ್ಲಿ ನಾಲ್ಕಾರು ಮನೆಗಳಿಗೆ ಹಾಗೂ ಪಂಪ್‌ಸೆಟ್–ಸ್ಪ್ರಿಂಕ್ಲರ್ ಇತ್ಯಾದಿಗಳಿಗೆ ವಿದ್ಯುತ್ ಸಂಪರ್ಕ ಬೇಕಾಗಿದೆ. ಅವರುಗಳೂ ವೈರಿಂಗ್ ಇತ್ಯಾದಿ ಎಲ್ಲಾ ಕೆಲಸ ಮುಗಿಸಿ ಕಾಯುತ್ತ ಕೂತು ಎರಡು ವರ್ಷದವರೆಗೂ ಆಗಿದೆ. "ಅವು ದುಡ್ಡು ಕೊಡುಕೆ ಅಂಜ್ತಾವೆ ಕಣಾ. ನಂಗೆ ಐನೂರೈನೂರು ಬಿಸಾಕ್ಲಿ. ಯರ್ಡು ದಿನ್ದಲ್ಲಿ ಯಲ್ಲವುಕ್ಕೂ ಕರೆಂಟ್ ಕೊಡ್ದೆ ಇದ್ರೆ ಕೇಳ್ಲಿ !". ಎನ್ನುತ್ತಾರಂತೆ.

ಇದರಲ್ಲಿ ಕೆಲವರು ಸ್ವಾಭಿಮಾನಿಗಳು ಹಟಕ್ಕೆ ಬೇರೆ ಡೀಸೆಲ್ ಪಂಪ್‌ಸೆಟ್ಟು ಇತ್ಯಾದಿ ತಂದು ಮೂವತ್ತು ನಲವತ್ತು ಸಾವಿರ ವೃಥಾ ಖರ್ಚು ಮಾಡಿಕೊಂಡವರಿದ್ದಾರೆ. ಇನ್ನು ಕೆಲ ದುರ್ಬಲ ಚಾತಕ ಪಕ್ಷಿಗಳು ದುಗ್ಗಪ್ಪ ಗೌಡರೆಂಬ ಬಿಳಿ ಮೋಡ ಅಲ್ಲೇ ತೇಲುತ್ತಿರುವುದನ್ನು (ಆಚೆ–ಈಚೆ ಅಲ್ಲೊಂದು–ಇಲ್ಲೊಂದು ಕಡೆ ಅಲ್ಪ ಸ್ವಲ್ಪ ನೀರು ಬೀಳಿಸಿರುವುದನ್ನೂ ಸಹ) ನೋಡುತ್ತ, ಈಗ ಬಂದೀತು.... ಎಂದು ಕಾದು ಗಂಟಲೊಣಗಿ ಈಗಲೋ ಆಗಲೋ ಎಂಬ ಸ್ಥಿತಿಗೆ ಮುಟ್ಟಿದ್ದಾರೆ.

ಆದರೆ ಆ ಬಿಳಿಮೋಡ ತಂಪಾಗಿ ಹನಿಯುವುದೇ ಇಲ್ಲ. ಅಲ್ಲಿ ಇಲ್ಲಿ ಹನಿಸಿದ್ದು ಅದನ್ನು ವಿಶೇಷವಾಗಿ 'ತಂಪು' ಮಾಡಿದ್ದರಿಂದ ಎಂಬುದು ಈ ಚಾತಕ ಪಕ್ಷಿಗಳಿಗೆ ಗೊತ್ತಿದ್ದರೂ ತಾವೂ ಹಾಗೆ ಮಾಡುವ ಚೈತನ್ಯ ಹೊಂದಿಲ್ಲ. ಚಾತಕ ಪಕ್ಷಿ ಮೋಡವನ್ನು ತಂಪು ಮಾಡುವ ಪರಿಪಾಠ ಯಾರೂ ಕೇಳರಿಯದ್ದುತಾನೆ !

ಹೀಗಾಗಿ ಕೆಲವರು ಹತಾಶೆಯ ತುತ್ತತುದಿ ಮುಟ್ಟಿ ಈ ಅಧಿಕಾರಿಗೆ ಶಾಪ ಹಾಕುವಾಗಿನ ಪರಿಸ್ಥಿತಿ ಹೃದಯ ವಿದ್ರಾವಕವಾಗಿರುತ್ತದೆ. ಅವರ ಮಾತಲ್ಲೇ ಕೇಳಿ— "ಈ ದುಗ್ಗಪ್ಪಗೌಡ ಒಬ್ಬ ಸತ್ತರೇನಾದರೂ ನಮ್ಮೂರು ಒಂದಿಷ್ಟು ಕರೆಂಟು, ನೀರು ಕಂಡೀತೋ ಏನೋ !" ಈ ಮಾತುಗಳನ್ನು ಬೇರೆ ಜಾತಿಯವರು ಆಡಿದ್ದರೆ ಹೊಟ್ಟೆಕಿಚ್ಚಿನ ಮಾತು ಎನ್ನಬಹುದಿತ್ತು. ಸ್ವತಃ ಅವರ ಜಾತಿಯವರೇ, ಅವರಿಗೆ ಬಹುಶಃ ಸಂಬಂಧಿಗಳೂ ಇರಬಹುದು, ಅಂಥವರು ಆಡಿದಾಗ ಈ ವ್ಯಕ್ತಿ ಎಷ್ಟೊಂದು ಜನ ದ್ವೇಷ ಕಟ್ಟಿಕೊಂಡಿದೆಯಲ್ಲ ಎಂದು ಆತಂಕವಾಗುತ್ತದೆ

ಇನ್ನು ಈ ಬಿಳಿಮೋಡ 'ಬಿಸಿಗೆ' ಕರಗಿದ್ದನ್ನೂ ಕೆಲವರು ಹೇಳುತ್ತಾರೆ. ಶೃಂಗೇರಿ ತಾಲ್ಲೂಕಿನ ಒಬ್ಬ ಶ್ರೀಮಂತ ಆಪ್ತ ಮಿತ್ರನನ್ನೂ (!) ಹೀಗೆ ಸತಾಯಿಸಿದಾಗ, ಒಂದು ದಿನ ಆತ ತನ್ನ ಕಾರಿನಿಂದ ಅರ್ಧ ರಾತ್ರಿ ನಡುದಾರಿಯಲ್ಲಿ ಈತನನ್ನು ಹೊರಗೆ ಕೆಡುಕೊಂಡು ಚೆನ್ನಾಗಿ 'ಕರಗಿಸಿ,' ಒಂದೇ ವಾರದಲ್ಲಿ ವಿದ್ಯುತ್ ಸಂಪರ್ಕ ಪಡೆದನಂತೆ! (ಈಗ ಆಪ್ತರಾಗಿಯೇ ಇದ್ದಾರಂತೆ !!)

(3ನೇ ಪುಟಕ್ಕೆ)

ಪದ್ಯದಂಕಣ

ಸೋಲು - ಗೆಲುವು- ವಾಸ್ತವಿಕತೆ

ಮಿನುಗು ತಾರೆಯ ನೋಡಿ ಹೇಳುತಿವೆ
ತುಣುಕು ಮೋಡಗಳು:
ಗೆದ್ದೆ ನೀ ಚಂದ್ರನನು, ಆದರೆ
ಸೋತಿರುವಿ ನೀ ಭಾನುವಿಗೆ !
ಬಿರಿದ ರಾತ್ರಿರಾಣಿಗೆ ಅಣಕಿಸುತಿದೆ
ಮಿಣುಕು ಹುಳುವು:
ಗೆದ್ದೆ ನೀ ಇರುಳನು, ಆದರೆ
ಸೋತಿರುವಿ ನೀ ಹಗಲಿಗೆ !
ಪ್ರೇಮಿಯನು ಪ್ರೀತಿಸುವ
ಪ್ರಿಯತಮೆಗೆ ಹೇಳುತಿದೆ ನಿಸರ್ಗವು:
ಗೆದ್ದೆ ನೀ ಪ್ರೀತಿಯನು, ಆದರೆ
ಸೋತಿರುವಿ ನೀ ಸೌಂದರ್ಯಕೆ !
ಅರಿಯನು ಹೊಯ್ದ ವೀರನಿಗೆ
ಅರುಹುತಿದೆ ಕಾಲಚಕ್ರವು:
ಗೆದ್ದಿರುವಿ ನೀ ವೈರಿಯನು, ಆದರೆ
ಗೆಲ್ಲಲಾರೆ ನೀ ವಿಜಯವನು !
ಜೀವನದ ಸಾರ್ಥಕತೆಯ ಪಡೆದಿರುವೆ
ಎನ್ನುವ ಮನುಜನಿಗೆ ಹೇಳುತಿದೆ
ವಾಸ್ತವವು:
"ಗೆದ್ದಿಲ್ಲ ನೀ ಸೋಲನ್ನು,
ಸೋಲು ಸೋಲೇ !"

—ಶೃಂಗೇಶ್, ಹುಬ್ಬಳ್ಳಿ.

ವಚನಗಳು

ದೊಡ್ಡ ಮೀನು ಸಣ್ಣ ಮೀನನು ಹಿಡಿದು
ನುಂಗುವುದು ಸಮುದ್ರದಲ್ಲಿ
ಇದು 'ಸಮುದ್ರ ನ್ಯಾಯ'
ಬಲಿಷ್ಠ ಪ್ರಾಣಿ ದುರ್ಬಲ ಪ್ರಾಣಿಗಳ ಹಿಡಿದು
ತಿಂದು ತೇಗುವುದು ಅರಣ್ಯದಲ್ಲಿ
ಇದು 'ಅರಣ್ಯ ನ್ಯಾಯ'
ನೀನಲ್ಲದಿದ್ದರೆ ನಿನ್ನಪ್ಪ ಎಂದು ಕಾಲ್ಕೆರೆದು
ಕುರಿಮರಿಯ ಕುತ್ತಿಗೆಯ ಮುರಿವುದು
ಇದು "ತೋಳ ಕುರಿಮರಿ ನ್ಯಾಯ"
ಈ ಎಲ್ಲ ನ್ಯಾಯಕ್ಕಿಂತ ಮಿಗಿಲಾದ
ಹಲವಾರು ನ್ಯಾಯ ಸಂಹಿತೆಗಳನು ಬರೆದ,
ನವನಾಗರಿಕ ಪ್ರಪಂಚದಲಿ ಸರ್ವತ್ರ
ಪ್ರಚಲಿತವಿರುವ ನ್ಯಾಯ ಮಾತ್ರ
ಮೇಲಿನವಕ್ಕಿಂತ ಭಿನ್ನವಾಗಿಲ್ಲ ನೋಡಾ, ಶಂಭುಲಿಂಗ.

x x x

ಮುಳ್ಳಿನ ಮೇಲೆ ಬಟ್ಟೆಯು ಬಿದ್ದಿದ್ದರೆ,
ಎಚ್ಚರಿಕೆಯಿಂದ ಬಿಡಿಸಿಕೊಳ್ಳಬೇಕು
ಸ್ವಲ್ಪ ಎಚ್ಚರ ತಪ್ಪಿದರೂ
ಹರಿದು ಹಾಳಾಗುವುದು
ಕೈ ತರೆದು ನೋವಾಗದಿರದು
ಎದುರಾಳಿಗಳ ನಡುವೆ
ಕೆಲಸವ ಮಾಡಬೇಕಾಗಿ ಬಂದಾಗ
ಇದು ನೆನಪಿನಲ್ಲಿರಲಯ್ಯ, ಶಂಭುಲಿಂಗ.

—ಎಸ್. ವಿ. ಮಲ್ಲಿಕಾರ್ಜುನ ಭಟ್ಟ.

ಪತ್ರಗಳು

ಆಗುಂಬೆ ಹಸಿರು ಹೆಸರು ಉಳಿಸಿ

(‘ಪ್ರಜಾವಾಣಿ’ಯಿಂದ)

ಮಾನ್ಯರೆ,

ಕಳೆದ ಒಂದು ತಿಂಗಳಿಂದ ಅಪ್ಪಿಕೋ ಚಳುವಳಿಯ ಕಾರ್ಯಕರ್ತರು ನದಿ ಮೂಲಗಳ ಉಳಿವಿಗಾಗಿ ತಲಕಾವೇರಿಯಿಂದ ಕಾಳಿ ನದಿ (ಗೋವಾ–ಕರ್ನಾಟಕ ಗಡಿ) ಮೂಲದವರೆಗೆ 1500 ಕಿ. ಮೀ. ಪಾದಯಾತ್ರೆಯನ್ನು ಆರಂಭಿಸಿದ್ದೇವೆ. ನಾವು ಈಗಾಗಲೆ ಕಾವೇರಿ, ನೇತ್ರಾವತಿಯ ಜಲಾನಯನ ಪ್ರದೇಶಗಳಲ್ಲಿ ತಿರುಗಾಡಿ ಅಧ್ಯಯನ, ಜನ ಜಾಗೃತಿಯ ಕೆಲಸ ಮಾಡಿದ್ದೇವೆ.

ಸದ್ಯ ಆಗುಂಬೆಗೆ ಬಂದಾಗ, ತುಂಗಾ ನದಿಯ ಜಲಾನಯನ ಕ್ಷೇತ್ರವಾದ ಈ ಸದಾ ಹಸಿರು ಕಾಡಿನಲ್ಲಿ ಅವ್ಯಾಹತವಾಗಿ ಪ್ಲೈವುಡ್ ಕಂಪೆನಿಗಳು ಮರ ಕಡಿಯುವುದನ್ನು ನೋಡಿದೆವು. ಪ್ರಕೃತಿಯ ಬೀಡಾದ ಆಗುಂಬೆಯ ಸದಾ ಹಸಿರು ಕಾಡಿನ ಮಧ್ಯೆ ದೊಡ್ಡ ದೊಡ್ಡ ವಾಹನದ ರಸ್ತೆ ನಿರ್ಮಾಣವಾಗಿದೆ. ಯಲಂದೂರು ಎಂಬ ಹಳ್ಳಿಯ ರೈತರು ನೀರಿನ ಬವಣೆಯಿಂದ ಬಳಲುತ್ತಿದ್ದಾರೆ. ಆಗುಂಬೆ ಕ್ಷೇತ್ರದಲ್ಲಿ ಮಳೆಯ ಪ್ರಮಾಣ 1962ರಲ್ಲಿ 463 ಅಂಗುಲ ಇದ್ದಿದ್ದು 1985ರಲ್ಲಿ 297 ಅಂಗುಲಗಳಿಗೆ ಇಳಿದಿದೆ.

ಪರಿಸರ ಸಮತೋಲನ ತಪ್ಪಿರುವ ಈ ದಕ್ಷಿಣದ ಚಿರಾಪುಂಜಿಯು ಬರಡಾಗುವ ಹಂತದಲ್ಲಿದೆ. ಅಪ್ಪಿಕೋ ಚಳುವಳಿಯ ಕಾರ್ಯಕರ್ತರು ಈ ಕಾಡಿನಲ್ಲಿ ಸುತ್ತಾಡಿ ಪ್ಲೈವುಡ್ ಕಂಪೆನಿಗೆ ಮರ ಬಲಿಯಾಗುವುದನ್ನು ಕಂಡರು. ಸದ್ಯ ಆಗುಂಬೆ–ಕಾರ್ಕಳ ರಸ್ತೆಯ ಪಕ್ಕದಲ್ಲಿ ಮರ ಕಡಿಯುವ ಸನ್ನಾಹವನ್ನು ಪ್ಲೈವುಡ್ ಕಾರ್ಖಾನೆಯೊಂದು ಮಾಡುತ್ತಲಿದೆ. ಈ ಆಗುಂಬೆಯ ಅರಣ್ಯದ ಹಸಿರನ್ನು ಉಳಿಸಲು ಸರಕಾರ ಪ್ರಯತ್ನಿಸದೆ, ಬರಗಾಲಕ್ಕೆ ಎಡೆ ಮಾಡಿ ಕೊಡುತ್ತಲಿದೆ. ಆಗುಂಬೆಯ ಈ ಹಸಿರಿನ ನಾಶವನ್ನು ತಡೆಯಲಾದೀತೆ?

ಆಗುಂಬೆ (ಮೊಕ್ಕಾಂ) **—ಪಾಂಡುರಂಗ ಹೆಗಡೆ** (‘ಅಪ್ಪಿಕೋ’ ಚಳುವಳಿ ಮುಖಂಡರು.)

ಹತಭಾಗ್ಯ ನಿರುದ್ಯೋಗಿ ನರ್ಸರಿ ಶಿಕ್ಷಕಿಯರು

ರಾಜ್ಯದಲ್ಲಿ ಕಳೆದ 8–10 ವರ್ಷಗಳಿಂದ ನರ್ಸರಿ ಅಥವಾ ಪೂರ್ವ ಪ್ರಾಥಮಿಕ ಶಿಕ್ಷಣ ತರಬೇತಿ ಪಡೆದ ಸುಮಾರು ಹತ್ತು ಸಹಸ್ರ ಶಿಕ್ಷಕಿಯರು ಇಂದು ಉದ್ಯೋಗ ಇಲ್ಲದೆ ಜೀವನ ನಿರ್ವಹಣೆಯಲ್ಲಿ ಕಂಗಾಲಾಗಿ ಪರಿತಪಿಸುತ್ತಿದ್ದಾರೆ. ಮೇಲಿಂದ ಮೇಲೆ ಪ್ರಾಥಮಿಕ ಶಾಲೆಗಳನ್ನು ಹೆಚ್ಚಿಸುವ ಕುರಿತು, ಪ್ರಾಥಮಿಕ ಶಿಕ್ಷಕರನ್ನು ತೆಗೆದುಕೊಳ್ಳುವ ಕುರಿತು ಪ್ರಸ್ತಾಪಗಳು ಕೇಳಿ ಬರುತ್ತಿವೆಯೇ ಹೊರತು ಪೂ. ಪ್ರಾ. ಶಿಕ್ಷಣ ತರಬೇತಾದ ನಿರುದ್ಯೋಗಿ ಹತಭಾಗಿನಿಯರ ಕುರಿತು ಯಾರೂ ಚಿಂತಿಸದಿರುವುದು ಅತ್ಯಂತ ವಿಷಾದದ ಸಂಗತಿ.

ಎಸ್.ಎಸ್.ಎಲ್.ಸಿ.ಯನ್ನು ಹೇಗೋ ಪಾಸು ಮಾಡಿ ಶಿಕ್ಷಣವನ್ನು ಮುಂದುವರಿಸಲು ಅಸಮರ್ಥರಾದ ಸಾವಿರಾರು ಮಂದಿ ಉದ್ಯೋಗ ಸಿಗುವುದೆಂಬ ಆಶೆಯಿಂದ ಒಂದು ವರ್ಷದ ಪೂ. ಪ್ರಾ. ಶಿಕ್ಷಣ ತರಬೇತಿ ಪಡೆದು ಬೇರೆ ಉದ್ಯೋಗಕ್ಕೂ ಯಾವುದೇ ಅವಕಾಶವಿಲ್ಲದಂತಾಗಿ ಸಂಕಷ್ಟದ ಪರಾಕಾಷ್ಠೆ ತಲುಪಿದ್ದಾರೆ. ಅದೆಷ್ಟೋ ಮಂದಿಗೆ 30–40 ವರ್ಷ ದಾಟಿದ್ದರಿಂದ ಸರಕಾರಿ ನೌಕರಿಗೆ ಸೇರುವ ವಯೋಮಿತಿಯೂ ಮೀರಿ ಹೋಗಿದೆ. ದಾರಿದ್ರ್ಯದ ಕಡುಶಾಪದಿಂದಾಗಿ ವರ್ಷ 30–35 ಕಳೆದರೂ ಇನ್ನೂ ಲಗ್ನವಾಗಿಲ್ಲ. ತರಬೇತಾದ ಪ್ರತಿಯೊಬ್ಬರೂ. “ಈ ವರ್ಷ ತೆಗೆದುಕೊಳ್ಳಬಹುದು, ಮುಂದಿನ ವರ್ಷ ತೆಗೆದುಕೊಳ್ಳಬಹುದು” ಎಂಬ ನಿರೀಕ್ಷೆಯಲ್ಲಿದ್ದರೆ ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳ ತರಬೇತಿ ಕಾಲೇಜುಗಳಿಂದ ಇನ್ನೂ ಸಾವಿರಾರು ಮಂದಿ ಪ್ರಮಾಣ ಪತ್ರ ಹೊತ್ತು ಹೊರ ಬರುತ್ತಿದ್ದಾರೆ.

ಕೆಲವೊಂದು ಹಿರಿಯ ಪ್ರಾಥಮಿಕ ಶಾಲೆಗೆ ಒಂದರಂತೆ ಬಾಲವಾಡಿ ಅಥವಾ ಪೂರ್ವ ಪ್ರಾಥಮಿಕ ಶಾಲೆ ತೆರೆಯುವ ಯೋಜನೆ ಕಳೆದ ನಾಲ್ಕಾರು ವರ್ಷಗಳ ಹಿಂದೆ ಒಮ್ಮೆ ಕಾರ್ಯರೂಪಕ್ಕೆ ಬಂದು ಒಂದೆರಡು ವರ್ಷದಲ್ಲಿಯೇ ನಿಂತು ಹೋಗಿದೆ. ‘ಅಕ್ಷರ ಸೇನೆ’ ಯೋಜನೆಯಲ್ಲಿ ಕೇವಲ ಎಂಟು ಜಿಲ್ಲೆಗಳಿಗೆ ಮಾತ್ರ ಈ ನಾಲ್ಕು ವರ್ಷಗಳಿಂದೀಚೆಗೆ 100 ಪೂರ್ವ ಪ್ರಾಥಮಿಕ ಶಾಲೆಗಳನ್ನು ಕೊಡಲಾಗಿದೆ.

ಪ್ರಾಥಮಿಕ ಶಿಕ್ಷಣಕ್ಕೆ ಭದ್ರ ಬುನಾದಿಯಾಗಿರುವ ಪೂರ್ವ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ದೇಶ ವಿದೇಶಗಳ ಮಹಾನ್ ಶಿಕ್ಷಣ ತಜ್ಞರು ಸಾರಿ ಹೇಳಿದ್ದಾರೆ. ಇಂದಿನ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯಲ್ಲಿಯೂ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಮಹತ್ವ ಕೊಡಲಾಗಿದೆ. ಶಾಲೆಗೊಂದರಂತೆ ಪೂರ್ವ ಪ್ರಾಥಮಿಕ ಶಾಲೆ ತೆರೆಯುವಂತಾದರೆ, ಇಲ್ಲವೆ ಏಕೋಪಾಧ್ಯಾಯ ಶಾಲೆಗಳಿಗೆ ಎರಡನೇ ಇಸಮೆಂದು ಪೂ.ಪ್ರಾ. ಶಿಕ್ಷಣ ತರಬೇತಿ ಪಡೆದವರನ್ನು ನೇಮಿಸಿಕೊಳ್ಳುವಂತಾದರೆ ಶಿಕ್ಷಣದ ಗುಣಮಟ್ಟವೂ ಸುಧಾರಿಸುವುದಲ್ಲದೆ, ನಿರುದ್ಯೋಗಿ ಸುಶಿಕ್ಷಿತ ಮಹಿಳೆಯರ ಜಟಿಲ ಸಮಸ್ಯೆಯೂ ಬಹುಮಟ್ಟಿಗೆ ಬಗೆಹರಿಯಬಹುದು.

ಸಮಾಜದ ನೇತಾರರೂ, ಶಿಕ್ಷಣ ಇಲಾಖೆ ಅಧಿಕಾರಿಗಳೂ, ಶಾಸಕರೂ, ಸಚಿವರೂ ಈ ಬಗ್ಗೆ ಒಟ್ಟಿಗೆ ಸೇರಿ ಚರ್ಚೆ ನಡೆಸಿ ವಿಷಯ ತಿಳಿದುಕೊಂಡಲ್ಲಿ ಸುಲಭವಾಗಿ ಈ ಸಮಸ್ಯೆ ಬಗೆಹರಿಯಬಹುದೆಂದು ಅನಿಸುತ್ತದೆ.

ಸಂಘದ ಬೇಡಿಕೆಗಳು

1) ಪ್ರತಿಯೊಂದು ಪ್ರಾಥಮಿಕ ಶಾಲೆಗೆ ಒಂದರಂತೆ ಪೂರ್ವ ಪ್ರಾಥಮಿಕ ಶಾಲೆಯನ್ನು ತೆರೆಯುವಂತಾಗಬೇಕು.

2) ಏಕೋಪಾಧ್ಯಾಯ ಶಾಲೆಗಳಿಗೆ ಹೆಚ್ಚಿನ ಶಿಕ್ಷಕರನ್ನು ತೆಗೆದುಕೊಳ್ಳುವಾಗ

(4ನೇ ಪುಟಕ್ಕೆ)

ದುಗ್ಗಪ್ಪ ಗೌಡರು ಮನುಷ್ಯರಾದಾರೆ?

(2ನೇ ಪುಟದಿಂದ)

ರೈತರನ್ನು, ಜನಸಾಮಾನ್ಯರನ್ನು ಹೀಗೆ ಸತಾಯಿಸಿ ದುಡ್ಡು ಸುಲಿಯಲು ಇವರು ಬಳಸುವ ತಂತ್ರ ಬೇರೆಲ್ಲ ಇಲಾಖೆಗಳವರು ಬಳಸುವಂಥದೇ–**ನಿಧಾನ ದ್ರೋಹ.** ಕಂಬ ಇಲ್ಲ, ತಂತಿ ಇಲ್ಲ, ಜನ ಇಲ್ಲ,....ಎಲ್ಲವೂ ಇದ್ದರೆ, ನಿಮ್ಮ ದಾಖಲೆಯಲ್ಲಿ ಅದೊಂದು ರಸೀದಿ ಕಳಿಸಿಲ್ಲವಲ್ರೀ; ಇದೊಂದು ರಿಪೋರ್ಟ್ ಕೊಡಿಸಿಲ್ಲವಲ್ರೀ; ಇನ್ನೆಂಥದೋ ಒಂದು ಕಾಪಿ ಲಗತ್ತಿಸಿಲ್ಲವಲ್ರಿ....ಇತ್ಯಾದಿ. ಏನೇನು ದಾಖಲೆ ಯಾವ್ಯಾವ ರೀತಿ ಬೇಕು ಎಂದು ಒಂದೇ ಬಾರಿ ಹೇಳುವುದಿಲ್ಲ. ಹಾಗೂ ಒಂದು ವೇಳೆ ಯಾರಾದರೊಬ್ಬ ಎಲ್ಲ ವಿಚಾರದಲ್ಲೂ ಪರಿಪೂರ್ಣವಾದ ದಾಖಲೆಗಳನ್ನು ಒದಗಿಸಿ ಬಿಟ್ಟರೆ, ಅದರಲ್ಲೇ ಒಂದೋ ಎರಡೋ ದಾಖಲೆಗಳು ಇವರ ಕಚೇರಿಯಲ್ಲೇ ನಾಪತ್ತೆಯಾಗಿ ಬಿಡುತ್ತವೆಂದೂ ಜನ ಹೇಳುತ್ತಾರೆ. ಅದನ್ನೂ ಎಲ್ಲ ಸರಿಮಾಡಿ ಕೊಟ್ಟುಬಿಟ್ಟರೆ ಕೊನೇ ಅಸ್ತ್ರ ‘ವೆಯಿಟಿಂಗ್ ಲಿಸ್ಟ್.’ ಈ ಬಲೆಗೆ ಬೀಳದ ಮಿಕವೇ ಇಲ್ಲ! ಅಂತೂ ಕೆಲಸ ಆಗುವ ಹಾಗಿಲ್ಲ.

ಆದೇ ಇವರ ಪಾಲಿನ ‘ಎಡೆಪೂಜೆ’ ಸಲ್ಲಿಸಿಬಿಟ್ಟರೆ ಇಲ್ಲದ ಕಂಬ, ತಂತಿ ಬಂದು ಬಿಡುತ್ತವೆ; ಯಾವುದೋ ಕೆಲವು ದಾಖಲೆಗಳು ಹೆಚ್ಚು ಕಮ್ಮಿ ಇದ್ದರೂ “ಅನೆಲ್ಲ ಸರಿ ಮಾಡಿಕೊಳ್ಳೋಣ....” ಇನ್ನು ‘ವೆಯ್ಟಿಂಗ್ ಲಿಸ್ಟ್’ ವಗೈರೆಯೆಲ್ಲ ಅಂಥವರಿಗೆ ದಾಂಬಟ್ಟು ಕೊಡುತ್ತವೆ. ಯಾರಾದರೂ ಕೇಳಬಲ್ಲ ಮೇಲ್ಪಟ್ಟವರಿದ್ದರೆ ತಾನೆ? ಅಥವಾ ಅವರು ಕೇಳಿದರೂ ಇವರಿಗೆ ಆದರ ಭಯ ಇದ್ದರೆ ತಾನೆ ?

ಈ ವ್ಯಕ್ತಿ. ಇಂಥ ತಮ್ಮ ಇತಿ ಮಿತಿಯಿಲ್ಲದ ಹಣದಾಹದಿಂದ ಬಹುಶಃ ತಮ್ಮ ಇಡೀ ಕಚೇರಿಯನ್ನು ಭ್ರಷ್ಟತೆ ಮತ್ತು ಅದಕ್ಷತೆಯ ಗಟಾರ ಮಾಡಿಟ್ಟುಕೊಂಡಂತಿದೆ. ಈ ಗಟಾರದ ಸುಳಿಗೆ ‘ಮುಂಜಾವು’ ಪ್ರೆಸ್ ಕೂಡ ಒಮ್ಮೆ ಸಿಕ್ಕಿದ್ದು ಹೆಚ್ಚಿನವರಿಗೆ ಗೊತ್ತಿರಲಿಕ್ಕಿಲ್ಲ. ಪ್ರೆಸ್ಸನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಬದಲಾಯಿಸಿದಾಗ ವಿದ್ಯುತ್ ಸಂಪರ್ಕ ವರ್ಗಾವಣೆಗಾಗಿ ಸಲ್ಲಿಸಿದ್ದ ಸಂಪೂರ್ಣ ದಾಖಲಾತಿಗಳು ಈ ಗಟಾರದೊಳಗೆ ಹುಗಿದು ಹೋಗಿ ಒಂದು ವರ್ಷ ಕಾಲ ನಾವು ದೊಡ್ಡ ಮುದ್ರಣ ಯಂತ್ರವನ್ನು ಕಾಲಿಂದ ತುಳಿದೇ ಚಲಾಯಿಸುತ್ತ ಪತ್ರಿಕೆಯನ್ನು ನಿಲ್ಲಗೊಡದೆ ನಡೆಸಿ, ತೀವ್ರ ಎದೆ ನೋವಿಗೆ ಈಡಾಗಿ ಅನಂತರ ಸ್ವಲ್ಪ ‘ಖಾರ’ವಾದಾಗ ವಿದ್ಯುತ್ ಸಂಪರ್ಕ ಸಿಕ್ಕಿದ್ದು ನಮಗೊಂದು ಎದೆ ನೋವಿನಷ್ಟೇ ಯಾತನೆಯ ನೆನಪಾಗಿ ಉಳಿದಿದೆ.

ತನ್ನ ವ್ಯಾಪ್ತಿಯ ಇಡೀ ಉಪ ವಿಭಾಗದಾದ್ಯಂತ ಎಲ್ಲ ವರ್ಗದ, ಎಲ್ಲ ಜಾತಿಯ ಜನ ಈ ಅಧಿಕಾರಿಯನ್ನು ‘ಆದರಿಸುವುದು’ ಕೇವಲ ಮೇಲೆ ಹೇಳಿದಂಥ ಅತಿ ಕಟುವಾದ ಶಾಪದಿಂದಲೇ ಎಂಬುದು ಆತನಿಗೂ ಗೊತ್ತಿಲ್ಲದೇ ಇಲ್ಲ. ಅವರ ಬಗ್ಗೆ ದೂಷಿಸಿ ಬರೆಯದ ಪತ್ರಿಕೆಯಿಲ್ಲ. ಗೋವಿಂದ ಗೌಡರು ಸಹ ಶಾಸಕ–ಮಂತ್ರಿಯಾಗಿ ಈತನನ್ನು ಬಹುಶಃ ಒಂದೋ ಎರಡೋ ಸಲ ವರ್ಗಾವಣೆ ಮಾಡಿಸಿದ್ದರಂತೆ. ‘ಅದರಪ್ಪನಂಥ’ ಪ್ರಭಾವ ಬಳಸಿ, ವರ್ಗಾವಣೆ ರದ್ದು ಮಾಡಿಸಿಕೊಂಡು ಇಲ್ಲೇ ಗೂಟವಾಗಿದ್ದಾರೆ. ಜನರ ಪ್ರಗತಿಯ ಕಾಲಿಗೆ ಕಟ್ಟಿದ ಉಕ್ಕಿನ ಗುಂಡಾಗಿದ್ದಾರೆ; ಬಾಳೆಹೊನ್ನೂರು ಉಪ ವಿಭಾಗದ ‘ಇದಿ ಅಮೀನ್’ ಆಗಿ ಆಳುತ್ತಿದ್ದಾರೆ (ಇದಿ ಅಮೀನ್: ನಿಜವಾಗಿಯೂ ನರಭಕ್ಷಣೆ ಮಾಡುತ್ತಿದ್ದವ; ಉಗಾಂಡ ದೇಶದ ಸರ್ವಾಧಿಕಾರಿ ಅಧ್ಯಕ್ಷನಾಗಿ ದಶಕ ಕಾಲ ಉರಿದು ಪದಚ್ಯುತನಾದವ)

ಇಷ್ಟೇ ಅಲ್ಲ ಕೊಪ್ಪ ತಾಲ್ಲೂಕಿನ ನಾರ್ವೆ ಸಮೀಪದ ಮರಿತೊಟ್ಲಿನಲ್ಲಿ ‘ದರ್ಖಾಸ್ತ್’ ಹೆಸರಿನಲ್ಲಿ ಹುಚ್ಚಾಪಟ್ಟೆ ಬೇಲಿ ಮಾಡಿದ್ದಾರಂತೆ. ಹತ್ತಾರು ವರ್ಷಗಳಿಂದ ಅಲ್ಲೆಲ್ಲ ಗುಡಿಸಲು, ಮನೆ ಕಟ್ಟಿಕೊಂಡು ವಾಸಿಸುತ್ತ ಹಿತ್ತಲು–ಬೇಲಿ ಮಾಡಿಕೊಂಡು ಕೂಲಿ–ನಾಲಿ ಮಾಡಿ ಜೀವಿಸುತ್ತಿರುವ ಬಡ ಬಗ್ಗರನ್ನೆಲ್ಲ ಇವರ ಈ ‘ದರ್ಖಾಸ್ತ್’ ಎಂಬ ಮುಳ್ಳು ಬೇಲಿ ವಿಷದ ಹಾವಾಗಿ ಸುತ್ತುವರಿದು ಕಬಳಿಸಿದೆಯೆಂದು ಅವರೆಲ್ಲ ದೊಡ್ಡ ದೊಡ್ಡ ಅಧಿಕಾರಿ, ಮಂತ್ರಿಗಳವರೆಗೂ ಇಟ್ಟ ಮೊರೆ ಅರಣ್ಯ ರೋದನವಾಗಿದೆಯಂತೆ.

ಇಷ್ಟಾಗಿಯೂ ದುಗ್ಗಪ್ಪ ಗೌಡ ದೊಡ್ಡ ಮನುಷ್ಯರು. ಕಾರು ಕೊಂಡಿದ್ದಾರೆ, (ಹೆಲಿಕಾಪ್ಟರೂ ಕೊಂಡಾರು – ಸರ್ಕಾರ ಪ[illegible] ವಾನಗಿ ಕೊಟ್ಟರೆ!) ದೊಡ್ಡ ದೊಡ್ಡ ಮನುಷ್ಯರ, ವಿಧಾನಸಭೆಗಿಂತ ಮಿಗಿಲಾದ [illegible]ಲ್ಲಾ ಪರಿಷತ್ತಿನ ಸದಸ್ಯರುಗಳ ಹೆಗಲ ಮೆ[illegible]ಲೆಲ್ಲ ಕೈ ಹಾಕಬಲ್ಲವರು....

ಆದರೆ ಜನರೂ ಕಾಯುತ್ತಿದ್ದಾರೆ. ಕ[illegible]ನೂನೋ, ಚಳುವಳಿಯೋ ಅಥವಾ ಅ[illegible]ಕ್ಕಿಂತಲೂ ಮಿಗಿಲಾದ ಇನ್ನಾವುವಾದರು ‘ಬಿಸಿ’ಯೋ—ಯಾವುದಕ್ಕೆ ಇವರು ಬಗ್[illegible]ತ್ತಾರೆ ಅಥವಾ ಕರಗುತ್ತಾರೆ ಎಂಬುದನ್ನು ಜನ ಎಚ್ಚರಿಕೆಯಿಂದ ಗಮನಿಸುತ್ತಿರು[illegible] ಹಾಗಿದೆ.

ಇದಿ ಅಮೀನ್, ಇರಾನಿನ ಶಾ, ಫಿ[illegible]ಪೀನ್ಸಿನ ಮಾರ್ಕೋಸ್, ತುರ್ತು ಸ್ಥಿತಿ[illegible] ಇಂದಿರಾಗಾಂಧಿ — ಯಾರೂ ನಿಲ್ಲಲಿ[illegible] ಖೊಮೇನಿ ಕೂಡ ಶಾಶ್ವತನಲ್ಲ. ಆದ[illegible] ಅವರು ಹೋಗುವುದು ಮುಖ್ಯವಲ್ಲ, ಹಾ[illegible] ನಾಶನಾಗುವ ಮೊದಲು ಅವರುಗಳು ಎಷ[illegible] ಲಕ್ಷ, ಕೋಟಿ ನಿರಪರಾಧಿಗಳನ್ನು ಹಿಂಸಿ[illegible]ದರು ಎಂಬುದು ಮುಖ್ಯ. ಆದರ ಬದಲ[illegible] ಅವರುಗಳು ಸ್ವಲ್ಪ, ಕೇವಲ 1% ಆದರ[illegible] ಮನುಷ್ಯರಾಗಿದ್ದಿದ್ದರೆ?

ನಮ್ಮ ದುಗ್ಗಪ್ಪ ಗೌಡರೂ ಅಷ್ಟೆ– ಕೇವಲ 1% ಮನುಷ್ಯರಾದರೂ ಸ[illegible]ಕು, ಮಲೆನಾಡು ಇನ್ನೂ 50% ನಷ್[illegible]ದರೂ ಸಮೃದ್ಧವಾದೀತು.

ಹತಭಾಗ್ಯ ನಿರುದ್ಯೋಗಿ ನರ್ಸರಿ ಶಿಕ್ಷಕಿಯರು

(3ನೇ ಪುಟದಿಂದ)

ಬಾಲವಾಡಿ ತರಬೇತಾದವರಿಗೇ ಆದ್ಯತೆ ಕೊಡಬೇಕು.

3) ಎಲ್ಲ ಖಾಸಗಿ ಬಾಲವಾಡಿಗಳನ್ನು ತರಬೇತಾದ ಶಿಕ್ಷಕಿಯರ ಸಮೇತ ಸರಕಾರ ವಹಿಸಿಕೊಳ್ಳುವಂತಾಗಬೇಕು. ಇಲ್ಲವೇ ಶಿಕ್ಷಕಿಯರಿಗೆ ಪೂರ್ಣ ಪ್ರಮಾಣದ ಅನುದಾನ ಕೊಡುವಂತಾಗಬೇಕು.

4) ಬಾಲವಾಡಿ ಇಲ್ಲವೇ ನರ್ಸರಿ ತರಬೇತಾದವರಿಗೆ ನೌಕರಿಗೆ ಸೇರುವ ಗರಿಷ್ಠ ವಯೋಮಿತಿಯನ್ನು 45ಕ್ಕೆ ಹೆಚ್ಚಿಸಬೇಕು.

5) ಬಾಲವಾಡಿ ತರಬೇತಿ ಪಡೆದ ಸಹಸ್ರಾರು ಮಂದಿ ಇನ್ನೂ ನಿರುದ್ಯೋಗಿಗಳಾಗಿರುವಾಗ ಪ್ರತಿ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಕೊಡುವುದನ್ನು ಹಾಗೂ ಹೊಸದಾಗಿ ತರಬೇತಿ ಕಾಲೇಜು ತೆರೆಯುವುದನ್ನು ನಿಲ್ಲಿಸುವಂತಾಗಬೇಕು.

ಕು|| ವಿದ್ಯಾ ಹೆಗಡೆ,
ಪ್ರಧಾನ ಕಾರ್ಯದರ್ಶಿ,
ಅಖಿಲ ಕರ್ನಾಟಕ ಬಾಲವಾಡಿ
ತರಬೇತಾದವರ ಸಂಘ (ರಿ.),
ಕರ್ಕಿ, ಹೊನ್ನಾವರ ತಾ||, ಉ. ಕ. ಜಿಲ್ಲೆ.

ಪಾಲಕ-ವಿದ್ಯಾರ್ಥಿ-ಬೋಧಕರ ಮಿಲನ ಸಮಾರಂಭ

ಶೃಂಗೇರಿ: ಇಲ್ಲಿನ ಹೆಣ್ಣು ಮಕ್ಕಳ ಪ್ರೌಢ ಶಾಲೆಯಲ್ಲಿ ಈಚೆಗೆ ಮೇಲ್ಕಂಡ ಸಮಾರಂಭವನ್ನು ಮೂರು ದಿನ ಆಚರಿಸಲಾಯಿತು. ಹಲವು ಮಂದಿ ಪೋಷಕರು ಭಾಗವಹಿಸಿ, ಸಲಹೆ-ಸಹಾಯ ನೀಡಿದರು. ವಿದ್ಯಾರ್ಥಿನಿಯರಿಂದ ಮನರಂಜನಾ ಕಾರ್ಯಕ್ರಮಗಳು ಹಾಗೂ ಮಕ್ಕಳಿಗೆ ಬಹುಮಾನ ವಿತರಣೆ ಮತ್ತು ಪಾಲಕರಿಗೆ ಗೌರವ ಸಮರ್ಪಣೆ ನಡೆದುವು.

ಹರಿಹರಪುರ ಮಂಡಲ ಜನತಾ ಕಾರ್ಯಕಾರಿಣಿ

ಹರಿಹರಪುರ: ಇಲ್ಲಿ ಜನತಾ ಪಕ್ಷದ ಸಭೆ ಈಚೆಗೆ ನಡೆದು ಮಂಡಲ ಪಂಚಾಯ್ತಿ ಮಟ್ಟದ ನೂತನ ಕಾರ್ಯಕಾರಿ ಸಮಿತಿ ರಚಿಸಲಾಗಿದೆ. ಸಮಿತಿಗೆ ಎ. ಬಿ. ವಾಸಪ್ಪ ಅಧ್ಯಕ್ಷರು, ಎಚ್. ಎಸ್. ಮಂಜುನಾಥ್ ಕಾರ್ಯದರ್ಶಿ, ಮಂಡಲ ಪಂಚಾಯ್ತಿಯ 7 ಜನ ಚುನಾಯಿತ ಸದಸ್ಯರು ಹಾಗೂ 57 ಜನ ಸದಸ್ಯರಾಗಿದ್ದಾರೆ.

ಕೊಪ್ಪದಲ್ಲಿ ಶಟ್ಲ್ ಟೂರ್ನಿ

ಕೊಪ್ಪ: ಇಲ್ಲಿನ ಫ್ರೆಂಡ್ಸ್ ಶಟ್ಲ್ ಬ್ಯಾಡ್ಮಿಂಟನ್ ಅಸೋಸಿಯೇಶನ್ ಆಶ್ರಯದಲ್ಲಿ ಕೊಪ್ಪ ನಗರ ಮಟ್ಟದ ಪುರುಷರ, ಮಹಿಳೆಯರ ಮತ್ತು ಮಿಕ್ಸೆಡ್ ಡಬಲ್ಸ್ ಶಟ್ಲ್ ಪಂದ್ಯಾವಳಿ ಮಾರ್ಚ್ 25, 26 ಮತ್ತು 27ರಂದು ಶಂಕರ್ ಕಂಪೆನಿ ಆವರಣದಲ್ಲಿ ನಡೆಯಲಿದೆ.

ಉತ್ಸವ

ಕೊಪ್ಪ: ಇಲ್ಲಿನ ಮೇಲಿನಪೇಟೆ ಟೋಲ್‌ಗೇಟ್ ಸಮೀಪದ ಸುಬ್ರಮಣ್ಯ ಮತ್ತು ಮಾಸ್ತಿಯಮ್ಮ ದೇವಸ್ಥಾನದಲ್ಲಿ ಕಲಾ ಸಾನ್ನಿಧ್ಯ ಹೋಮ ಮತ್ತು ಕೆಂಡದಾರ್ಚನೆ ಇತ್ಯಾದಿ ಕಾರ್ಯಕ್ರಮಗಳು ಏಪ್ರಿಲ್ 2 ಮತ್ತು 3ರಂದು ನಡೆಯುತ್ತವೆ.

ನೇಣು ಹಾಕಿಕೊಂಡು ಸಾವು

ನಾರ್ವೆಯಲ್ಲಿ ಕೂಲಿ ಮಾಡುತ್ತಿದ್ದ ಸುಬ್ಬ ಎಂಬ 50 ವರ್ಷದ ವ್ಯಕ್ತಿ ಮಾ. 11 ರಂದು ನೇಣು ಹಾಕಿಕೊಂಡು ಮೃತಪಟ್ಟಿದ್ದು, ಕೊಪ್ಪ ಪೊಲೀಸರು ಮಹಜರು ನಡೆಸಿದರು.

ಮಾ. 22 ಭಾನುವಾರ ಜಯಪುರದಲ್ಲಿ ಉಚಿತ ಕಾನೂನು ನೆರವು ಶಿಬಿರ

ಜಯಪುರ : ನ. ರಾ. ಪುರದ ಉಚಿತ ಕಾನೂನು ನೆರವು ಸಮಿತಿಯ ವತಿಯಿಂದ ಇಲ್ಲಿನ ಹಿ. ಪ್ರಾ. ಶಾಲೆಯ ಆವರಣದಲ್ಲಿ ಮಾ. 22ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಉಚಿತ ಕಾನೂನು ನೆರವು ಶಿಬಿರ ಏರ್ಪಟ್ಟಿದೆ. ನ.ರಾ. ಪುರದ ವಕೀಲರು ಉಚಿತವಾಗಿ ಸಲಹೆಗಳನ್ನು ನೀಡುವಂತೆ ವ್ಯವಸ್ಥೆ ಮಾಡಲಾಗಿದೆ.

'ಯುನೈಟೆಡ್ ಇಂಡಿಯು'ದಿಂದ ಅಪಘಾತ ವಿಮೆ ಹಣ ವಿತರಣೆ

ಹರಿಹರಪುರ: ಅಪಘಾತಕ್ಕೀಡಾಗಿ ಅಸು ನೀಗಿದ, ಕಾಡಯ್ಯ ಅವರ ವಿಮಾ ಹಣವನ್ನು ಈಚೆಗೆ ಸಿಗದಾಳಿನಲ್ಲಿ ನಡೆದ ಸಮಾರಂಭದಲ್ಲಿ ಅವರ ಪತ್ನಿ ಶ್ರೀಮತಿ ಬೆಳ್ಳಿಯವರಿಗೆ ನೀಡಲಾಯಿತು.

ಯುನೈಟೆಡ್ ಇಂಡಿಯ ಇನ್ಶೂರೆನ್ಸ್ ಕಂಪೆನಿ ಏರ್ಪಡಿಸಿದ್ದ ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಶಿವಮೊಗ್ಗ ವಿಭಾಗೀಯ ಅಧಿಕಾರಿ ಎಂ. ಬಿ. ರಾವ್, 15 ಸಾವಿರ ರೂ.ಗಳ ಚೆಕ್ಕನ್ನು ಬೆಳ್ಳಿಯವರಿಗೆ ನೀಡಿದರು. ಕಾಡಯ್ಯ ಅವರ ನಿಧನದ ಕೇವಲ 3 ತಿಂಗಳೊಳಗೆ ಈ ಹಣ ವಿತರಣೆಯಾಗಿದೆ.

ಸಂಸ್ಥೆಯ ಸಹಾಯಕ ಶಾಖಾಧಿಕಾರಿ ಟಿ. ಆರ್. ಶ್ರೀನಿವಾಸ್, ಡಾ|| ಶಿವಲಿಂಗಮೂರ್ತಿ, ಡಾ|| ತಿಮ್ಮಪ್ಪ, ಪಿ. ಎನ್. ಚಡಗ ಮತ್ತು ಎಸ್. ಪಿ. ರಾಮಮೋಹನ್ ಮುಖ್ಯ ಅತಿಥಿಗಳಾಗಿದ್ದರು.

'ತಾಳಿಭಾಗ್ಯ' ಯೋಜನೆಯಡಿ

ಸಾಮೂಹಿಕ ಮದುವೆಗೆ ಅರ್ಜಿ ಆಹ್ವಾನ

ಶೃಂಗೇರಿ: ಕಡು ಬಡವರಿಗೆ ವಿವಾಹ ಮಾಡಿಕೊಳ್ಳಲು ನೆರವಾಗುವುದಕ್ಕಾಗಿ, ಸರ್ಕಾರ ರೂಪಿಸಿರುವ 'ತಾಳಿಭಾಗ್ಯ' ಯೋಜನೆಯಂತೆ ತಾಳಿ, ಧೋತ್ರ, ಸೀರೆ-ಕುಪ್ಪಸಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಈ ಸವಲತ್ತನ್ನು ಪಡೆಯಲು ಈ ಕೆಳಕಂಡ ಅರ್ಹತೆ ಉಳ್ಳವರಾಗಿರಬೇಕು:

1. ಹುಡುಗನ ಅಥವಾ ಹುಡುಗಿಯ ಕುಟುಂಬದಲ್ಲಿ ಯಾರಾದರೊಬ್ಬರು "ಹಸಿರು ಕಾರ್ಡ್"ನ್ನು ಹೊಂದಿರಬೇಕು.
2. ಹುಡುಗಿಯಾಗಲಿ ಹುಡುಗನಾಗಲಿ ಈ ಸವಲತ್ತಿನ ಸೌಲಭ್ಯ ಹೊಂದಲು ಒಂದೇ ಒಂದು ಸಾರಿ ಅವಕಾಶವಿರುತ್ತದೆ. (ಮರು ಮದುವೆಗೆ ಸೌಲಭ್ಯವಿಲ್ಲ.)
3. ಬೇರೆ ಯಾವ ಸಂಘ ಸಂಸ್ಥೆಗಳಿಂದ ಅಥವಾ ಸರ್ಕಾರದಿಂದ ಯಾವುದೇ ರೀತಿಯ ಸಹಾಯವನ್ನು ಈ ಉದ್ದೇಶಕ್ಕೆ ಪಡೆದಿರಬಾರದು.
4. ಈ ಸವಲತ್ತು ಸಾಮೂಹಿಕ ಮದುವೆಯಾಗುವವರಿಗೆ ಮಾತ್ರ ದೊರಕುವುದು.

ಮೇಲ್ಕಂಡ ಅರ್ಹತೆಯುಳ್ಳವರು ಶೃಂಗೇರಿಯ ತಹಶೀಲ್ದಾರರವರ ಕಛೇರಿಯಲ್ಲಿ ಅಥವಾ ಈ ತಾಲ್ಲೂಕಿಗೆ ಸಂಬಂಧಿಸಿದ ರಾಜಸ್ವ ನಿರೀಕ್ಷಕರು ಅಥವ ಗ್ರಾಮ ಲೆಕ್ಕಿಗರ ಕಛೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕು. ಸಾಮೂಹಿಕ ಮದುವೆ ದಿನಾಂಕ: 20-4-1987ರಂದು ನಡೆಯುವುದು.

ವಾರ್ಷಿಕೋತ್ಸವ

ಅಡ್ಡಗದ್ದೆ: ಇಲ್ಲಿನ ಹಿರಿಯ ಪ್ರಾಥಮಿಕ ಪಾಠಶಾಲೆಯ ಹಾಗೂ ವಿನಾಯಕ ಕಲಾ ಸಂಘದ ವಾರ್ಷಿಕೋತ್ಸವಗಳು ಮಾ. 5 ಮತ್ತು 6ರಂದು ನಡೆದವು. ಎರಡೂ ದಿನಗಳೂ ನಾಟಕ ಹಾಗೂ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನೂ ಪ್ರಮುಖರ ಉಪನ್ಯಾಸಗಳನ್ನೂ ಏರ್ಪಡಿಸಲಾಗಿತ್ತು.

ಸಹ್ಯಾದ್ರಿ ಯುವಕ ಸಂಘ

ಬೊಮ್ಲಾಪುರ: ಇಲ್ಲಿನ ಸಹ್ಯಾದ್ರಿ ಯುವಕ ಸಂಘಕ್ಕೆ ನೂತನ ಸಾಲಿಗೆ ಎಸ್. ಎನ್ ರಾಮಸ್ವಾಮಿ ಅಧ್ಯಕ್ಷರಾಗಿ, ಎಂ. ಕೆ ರತ್ನಾಕರ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ

ಚಂದಾ ಹಣ ಕಳಿಸಿ
ಸಹಕರಿಸಿ
ವಾರ್ಷಿಕ ಚಂದಾ 25 ರೂ.

ಶಿವಮೊಗ್ಗ ಅಡಿಕೆ ಧಾರಣೆ

(ಮ್ಯಾಮ್ಕೋಸ್) ತಾ|| 13.3.1987

ಸರಕು : 2919 – 3529
ಚಿಟ್ಟೆ : 1800 – 2150
ಇಡಿ : 1200–1553
ಗೊರಬಲು : 800 –100
ಚಾಲಿ : 800–1200
ಏಲಕ್ಕಿ 40–170

ಸಾಗರ ಅಡಿಕೆ ತಾ|| 17.3.87

ಇಡಿ ಅಡಿಕೆ ರೂ. 1412
ಆಪಿ ರೂ. 2601–3201
ಚಾಲಿ 1221–1401
ಸಿಪ್ಪೆ ಗೋಟು ರೂ. 469–620
ಮೆಣಸು ರೂ. 5109–5136

ಕೊಪ್ಪ ಶಾಖೆಯಲ್ಲಿ 22.3.87ರಂದು ಅಡಿಕೆ ವ್ಯಾಪಾರ ಇರುತ್ತೆ. ಈ ಸಾಲಿನ ಸುಗ್ಗಿಯ ಕೊನೇ ವ್ಯಾಪಾರ 5–4–1987 ಭಾನುವಾರ ನಡೆಯುತ್ತೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.